**ಸಿಸಿ ಃ 735/2021**

**ಚಾಸಾ –3**

**ಪ್ರಾಸಾ –3**

ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 04-06-2024

ಪಾಟಿ ಸವಾಲುಃ ಶ್ರೀ. ಹೆಚ್.ಈ.ಪಿ ವಕೀಲರಿಂದ

ನಾನು ವಿದ್ಯಬ್ಯಾಸ ಮಾಡಿಲ್ಲ. ಅಪಘಾತದ ನಂತರ ನಾನು ಸೋಮವಾರಪೇಟೆ ಠಾಣೆಗೆ ಹೋಗಿ ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ. ನಾನು ಅಪಘಾತ ಆದ ದಿನ ಹೇಳಿಕೆ ಕೊಟ್ಟಿರುತ್ತೇನೆ. ಅಪಘಾತ 25 ನೇ ಮೇ 2021 ರಂದು ಆಗಿರುತ್ತದೆ. ಆ ಸಮಯದಲ್ಲಿ ದೇಶಾದ್ಯಂತ ಕರೋನ ದಿಂದ ಲಾಕ್ ಡೌನ್ ಇತ್ತು ಎಂದರೆ ಸರಿ. ಆ ಸಮಯದಲ್ಲಿ ಸರ್ಕಾರದ ವತಿಯಿಂದ ಯಾವುದೇ ಸಾರ್ವಜನಿಕರು ಸ್ವತಂತ್ರವಾಗಿ ಹೊರಗಡೆ ಓಡಾಡಲು ನಿರ್ಬಂಧ ಇತ್ತು ಎಂದರೆ ಸರಿ. ತುರ್ತು ಪರಿಸ್ಥಿತಿ ಇದ್ದಲ್ಲಿ ಮಾತ್ರ ಜಿಲ್ಲಾಧಿಕಾರಿಯಿಂದ / ಸಂಬಂಧಿಸಿದ ಇಲಾಖೆಯಿಂದ ಹೊರಗಡೆ ಹೋಗಲು ಅನುಮತಿ ಪಡೆಯಬೇಕು ಎಂದರೆ ಸರಿ. ನನಗೆ ಆರೋಗ್ಯ ಸರಿಯಿಲ್ಲದ ಕಾರಣ ಚಾಸಾ 1 ನನ್ನ ಮನೆಗೆ ಬಂದಿರುತ್ತಾರೆ, ನನಗೆ ಜ್ವರ ಜಾಸ್ತಿಯಾಗಿತ್ತು ಹಾಗಾ ಬಂದಿದ್ದರು. ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ಈ ವಿಚಾರವನ್ನು ಹೇಳಿಕೆಯಲ್ಲಿ ಹೇಳಿಲ್ಲ. ನನ್ನ ಮಗಳು ನನ್ನ ಮನೆಗೆ ಬೇರೆ ಕಾರಣ ಇರಲಿಲ್ಲ. ನನ್ನ ತಂಗಿ ಮನೆಯಲ್ಲಿ ಪೂಜೆ ಇತ್ತು ಆದ ಕಾರಣದಿಂದ ಹೊರಟಿರುತ್ತೇವೆ,

ಈಶ್ವರ್ ನನ್ನ ಸ್ನೇಹಿತರು. ನಾವು ಹೋಗುತ್ತಿದ್ದ ಆಟೋ ಬಾಡಿಗೆ ಆಟೋ ಎಂದರೆ ಸರಿ. ಈಶ್ವರ್ ದೊಡ್ಡತ್ತೂರು ಗ್ರಾಮದಲ್ಲಿ ಆಟೋ ಚಲಾಯಿಸುತ್ತಿದ್ದರು ಎಂದರೆ ಸರಿ. ಬಾಡಿಗೆ ಚಲಾಯಿಸುವ ಆಟೋದವರಿಗೆ ಪರವಾನಿಗೆ ಪಡೆದ ಸ್ಥಳದಿಂದ 15 ಕಿಲೋ ಮೀಟರ್ ವ್ಯಾಪ್ತಿ ಹೊರಗಡೆ

ಹೋಗುವ ಅವಕಾಶ ಇಲ್ಲ ಎಂದರೆ ಸರಿ. ನಮ್ಮ ಮನೆ ಕುಶಾಲನಗರದ ಗೌಡ ಸಮಾಜದ ಬಳಿ ಇದೆ. ಕುಶಾಲನಗರದಿಂದ ಬೆಂಬಲೂರು ಗ್ರಾಮಕ್ಕೆ ಕೂಡಿಗೆ, ಹೆಬ್ಬಾಳೆ, ಸಿದ್ದಲಿಂಗಪುರ, ಬಾಣವಾರ ಮಾಲಂಬಿ, ಶನಿವಾರಸಂತೆ ಮಾರ್ಗವಾಗಿ ಹೋಗಬೇಕು ಎಂದರೆ ಸರಿ. ಆ ಮಾರ್ಗವಾಗಿ ಮೇ 2021 ರಲ್ಲಿ ವಾಹನ ಚಲಾವನೆ ಮಾಡಲು ಅವಕಾಶ ಕೊಡುತ್ತಿರಲಿಲ್ಲ ಎಂದರೆ ಸರಿ. ನಾವು ಹಾರಂಗಿ ಮಾರ್ಗವಾಗಿ ಬಂದಿರುತ್ತೇವೆ. ಮೇಲೆ ಹೇಳಿದ ಮಾರ್ಗದಲ್ಲಿ ಬಂದಿಲ್ಲ. ನಾವು ಪೋಲೀಸರಿಗೆ ಗೊತ್ತಾಗದ ರೀತಿ ಹೋಗಿರುತ್ತೇವೆ. ಕುಶಾಲನಗರದಿಂದ ಹೊರಟು ಗಣಗೂರು ತಲುಪುವರೆಗೆ ನಾವು ಪೊಲೀಸರನ್ನು ಭೇಟಿ ಮಾಡಲಿಲ್ಲ. ನಾವು ಪ್ರಯಾಣಿಸುತ್ತಿದ್ದ ಆಟೋ 3 ಚಕ್ರದ ಆಟೋ. ನಾವು 3 ಜನ ಕೂರುವಂತಹ ಆಟೋದಲ್ಲಿ ಹೋಗಿರುತ್ತೇವೆ. ಮೃತ ಭುವನ್ ಗೆ 15 ವರ್ಷ ವಯಸ್ಸು, ಧನುಷ್ ರವರಿಗೆ 14 ವರ್ಷ ವಯಸ್ಸು. ಆ ಆಟೋದಲ್ಲಿ ನಾನು, ನನ್ನ ಪತ್ನಿ, ನನ್ನ ಮಗಳು, ನನ್ನ ಇಬ್ಬರು ಮೊಮಕ್ಕಳು, ಆಟೋ ಚಾಲಕ ಈಶ್ವರ್ ಹೋಗುತ್ತಿದ್ದೇವು.

ಆಟೋ ಹಿಂಭಾಗದಲ್ಲಿ ಬಲಭಾಗದಲ್ಲಿ ನನ್ನ ಮೊಮ್ಮಗ ಕೂತಿದ್ದೆ, ಅವರ ಪಕ್ಕ ನನ್ನ ಪತ್ನಿ ಕೂತಿದ್ದರು, ಅವರು ಪಕ್ಕ ನನ್ನ ಮಗಳು, ಅವರ ಪಕ್ಕದಲ್ಲಿ ನಾನು ಕುಳಿತಿದ್ದೆ. ನಮ್ಮ ಆಟೋಗೆ ಮುಖಾ ಮುಖಿಯಾಗಿ ಡಿಕ್ಕಿ ಪಡಿಸಿರುವುದಿಲ್ಲ, ಎದುರುಬಂದಿ ಬಂದ ವಾಹನ ನಮ್ಮ ವಾಹನಕ್ಕೆ ಬಲಭಾಗಕ್ಕೆ ಗುದ್ದಿರುತ್ತಾರೆ. ಇದರಿಂದ ನಮ್ಮ ಆಟೋಗೆ ಜಖಂ ಆಗಿತ್ತು. ಅಪಘಾತ ಪಡಿಸಿದ ವಾಹನ ಹೋಗ್ತಾ ಇತ್ತು ಅಲ್ಲಿದ್ದ ಸ್ಥಳೀಯರು ಕರೆದುಕೊಂಡು ಬಂದಿರುತ್ತಾರೆ. ಅಪಘಾತ ಪಡಿಸಿದ ವಾಹನದ

ಮುಂಭಾಗದ ಗಾಜು ಹೊಡೆದಿಲ್ಲ ಸೈಡಿನಲ್ಲಿ ಡ್ಯಾಮೇಜ್ ಆಗಿರುತ್ತದೆ. ನಮ್ಮ ಆಟೋ ಪಲ್ಟಿ ಆಗಿಲ್ಲ. ನಾನು ಆಟೋ ಒಳಗೆ ಕೂತಿದ್ದೆ ಆಟೋ ಹೊರಗೆ ಬಿದ್ದಿಲ್ಲ. ಅಪಘಾತದಲ್ಲಿ ನನಗಾಗಲಿ ಮತ್ತು ಚಾಲಕನಿಗೆ ಯಾವುದೇ ಗಾಯ ಆಗಲಿಲ್ಲ. ಬಲಭಾಗದ ಆಟೋಗೆ ಕಬ್ಬಿಣದ ಗ್ರಿಲ್ಸ್ ಇತ್ತು. ಅದನ್ನು ಜನರು ಬೀಳಬಾರದು ಎಂದು ಆಗಿರುತ್ತಾರೆ ಎಂದರೆ ಸರಿ. ಆಟೋಗೆ ಎಡ ಭಾಗದಲ್ಲಿ ಡೋರ್ ಇರಲಿಲ್ಲ.

ಸದರಿ ದಿನ ಮುಂಭಾಗ ಯಾವ ವಾಹನಗಳು ಬಂದಿವೆ ಎಂದು ಗಮನಿಸಿಲ್ಲ. ಸದರಿ ದಿನ ಎದುರುಗಡೆಯಿಂದ ಬಂದಂತಹ ವಾಹನದ ನೊಂದಣಿ ಸಂಖ್ಯೆಯನ್ನು ತಿಳಿದುಕೊಂಡು ಪೊಲೀಸರಿಗೆ ಹೇಳಿಲ್ಲ. ಎದುರುಬದಿ ವಾಹನ ಮತ್ತು ನಾವು ಹೋಗುತ್ತಿದ್ದ ವಾಹನಗಳ ನೊಂದಣಿ ಸಂಖ್ಯೆ ನಾನು ಹೇಳಿಲ್ಲ. ಅಪಘಾತ ಪಡಿಸಿದ ವಾಹನದಲ್ಲಿ ಚಾಲಕ ಮಾತ್ರ ಇದ್ದರು. ನನ್ನ ಪತ್ನಿಗೆ ಎದೆಗೆ ಗಾಯ ಆಗಿರುತ್ತದೆ. ಭುವನ್ ಗೆ ಮೊದಲು ಎಡಗೈ ಮುರಿದಿತ್ತು ನಂತರ ಆಟೋದಿಂದ ಹೊರ ಬಿದ್ದಿರುತ್ತಾರೆ. ಬಾಯಲ್ಲಿ ಮತ್ತು ಮೂಗಿನಲ್ಲಿ ರಕ್ತ ಬಂದಿರುತ್ತದೆ. ಅಪಘಾತ ಆದ ಸ್ಥಳ ನೇರವಾಗಿತ್ತು. ಗೋಣಿಮರೂರಿನಿಂದ ಮಾಲಂಬಿಗೆ ಹೋಗುವ ರಸ್ತೆ ಇಳಿಮುಖವಾಗಿದೆ ಎಂದರೆ ಸರಿಯಲ್ಲ ಅದು ಸಮತಟ್ಟಾಗಿದೆ. ಸದರಿ ರಸ್ತೆ ಅಗಳ ರಸ್ತೆ. ಎರಡು ದೊಡ್ಡ ವಾಹನಗಳು ಸರಾಗವಾಗಿ ಹೋಗುತ್ತವೆ. ನಮ್ಮ ಆಟೋ 30-40 ವೇಗದಲ್ಲಿ ಹೋಗುತ್ತಿತ್ತು. ವಾಹನ ಬಹಳ ನಿಧಾನವಾಗಿ ಚಲಾಯಿಸುತ್ತಿದ್ದರೆ ಅಪಘಾತವನ್ನು ಹೇಗಾದರೂ ತಪ್ಪಿಸಹುದು ಎಂದರೆ ಸರಿ. ಅಪಘಾತ ಸ್ಥಳದ ಅಕ್ಕ ಪಕ್ಕ ವಾಸದ ಮನೆಗಳು ಇಲ್ಲ ಶಾಲೆ ಇದೆ ಪಕ್ಕದಲ್ಲಿ ದೇವಸ್ಥಾನ ಇದೆ. ಅಲ್ಲಿ 10-15 ಜನ ಸೇರಿದ್ದರು. ಈಶ್ವರ್

ರವರಿಗೆ ವಾಹನ ಚಲಾವನೆ ಮಾಡಲು ಪರವಾನಿಗೆ ಇರಲಿಲ್ಲ ಎಂದರೆ ಸರಿ. ನಾವು ಪ್ರಯಾಣಿಸುತ್ತಿದ್ದ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿ. ನನ್ನ ಪತ್ನಿ ಮತು ಮಗಳು ಅಪಘಾತ ಸಂಬಂಧ ಪರಿಹಾರ ಕೋರಿ ಹಾಸನದಲ್ಲಿ ಪ್ರಕರಣ ದಾಖಲು ಮಾಡಿರುತ್ತೇವೆ. ಈಶ್ವರ್ ರವರು ಅವರು ಚಲಾಯಿಸುತ್ತಿದ್ದ ವಾಹನದಲ್ಲಿ ಅಗತ್ಯಕ್ಕಿಂತ ಹೆಚ್ಚು ಜನರನ್ನು ಕೂರಿಸಿಕೊಂಡು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಅಪಘಾತ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಾವು ಚಲಾಯಿಸುತ್ತಿದ್ದ ಆಟೋಗೆ ಕೇವಲ 3 ಜನರನ್ನು ಕರೆದುಕೊಂಡು ಹೋಗುವ ಸಾಮರ್ಥ್ಯ ಇದ್ದು ಚಾಸಾ 4 ಅತಿ ಹೆಚ್ಚು ಜನರನ್ನು ಕೂರಿಸಿಕೊಂಡು ಹೋಗಿ ಸ್ವಯಂ ಪ್ರೇರಿತವಾಗಿ ಅಪಘಾತ ಪಡಿಸಿದ್ದಾರೆ ಎಂದರೆ ಸರಿಯಲ್ಲ. ಚಾಸಾ 4 ರವರ ವಾಹಕ್ಕೆ ವಿಮೆ ಇಲ್ಲದ ಕಾರಣ ಮತ್ತು ಪರವಾನಿಗೆ ಇಲ್ಲದ ಕಾರಣ ಮತ್ತೊಂದು ವಾಹನದ ಮೇಲೆ ಪ್ರಕರಣ ದಾಖಲು ಮಾಡಿದರೆ ವಿಮೆ ಸಿಗುತ್ತದೆ ಎಂದು ಚಾಸಾ 4 ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರಿಗೆ ಸೇರಿದ ವಾಹನ ಯಾವುದೇ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರವರ ಮಾತನ್ನು ಕೇಳಿ ಪ್ರಕರಣ ದಾಖಲು ಮಾಡಿ ವಿಮೆ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವೈದ್ಯರಿಗೆ ಅಪಘಾತ ಆಗಿದೆ ಎನ್ನುವ ವಿಚಾರವನ್ನು ನಾನು ಹೇಳಿರುತ್ತೇನೆ. ಆಸ್ಪತ್ರೆಯಲ್ಲಿ ರಾತ್ರಿ ಪೂರ್ತಿ ಇದ್ದೇವು. ಆಗ ಸೋಮವಾರಪೇಟೆ ಪೊಲೀಸರು ಆಸ್ಪತ್ರೆಗೆ ಬಂದು ವಿಚಾರಣೆ ಮಾಡಿರುತ್ತಾರೆ. ಪೊಲೀಸರು ಆಸ್ಪತ್ರೆಗೆ ಬಂದಾಗ ಪರಕರಣದ ಸಂಬಂಧ ದೂರನ್ನು ಆಸ್ಪತ್ರೆಯಲ್ಲಿ ಪಡೆದಿರುತ್ತಾರೆ. ಆಗ ನಡೆದ ವಿಚಾರವನ್ನು ವೈದ್ಯರು ಹೇಳಿರುತ್ತಾರೆ. ಪೊಲೀಸರು ಚಾಸಾ 4 ರವರನ್ನು ವಿಚಾರ ಮಾಡಿ ಹೇಳಿಕೆ

ಪಡೆದಿಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಪತ್ನಿ ಮತ್ತು ಮಗಳಿಗೆ ಪರಿಹಾರ ಹಣ ಸಿಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲು ಮುಕ್ತಾಯವಾಯಿತು.
ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಸಹಿ/-
ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ